# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-4088/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 30/01/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಡಾ. ಬಾಳಸಾಹೇಬ್ ನೂರೊಂದಪ್ಪ ಹಾಲಪ್ಪನವರ, ಸಾ:ಸದಲಗ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಡಾ. ಬಾಳಸಾಹೇಬ್ ನೂರೊಂದಪ್ಪ ಹಾಲಪ್ಪನವರ್ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸದಲಗ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ತನಗೆ ಟಿಪಿಸಿ ನಂ.1448ರ ಜಾಗ ಇದ್ದು, ಸದರಿ ಜಾಗದ ಪಕ್ಕದಲ್ಲಿ ಟಿಪಿಸಿ ನಂ.1446ರ ಆಸ್ತಿ ಇದ್ದು, ಅದಕ್ಕೆ ಶ್ರೀ ಬಾಬು ಫೀರಪ್ಪ ಚಂದಗಡೆ ಇವರು ಮಾಲೀಕರಾಗಿದ್ದು, ಸದರಿಯವರು ಪಟ್ಟಣ ಪಂಚಾಯತಿಗೆ ತಮ್ಮ ಜಾಗದ ಚೆಕ್ಕುಬಂದಿಯ ಬಗ್ಗೆ ಮಾಹಿತಿಯನ್ನು ಸುಳ್ಳು ಪ್ರಮಾಣ ಪತ್ರ ನೀಡಿ, ತಮ್ಮ ಟಿಪಿಸಿ ನಂ.1446ರ ಆಸ್ತಿಯ ಉತ್ತರಕ್ಕೆ ಶ್ರೀ ಕುಮಾರ ಆದಪ್ಪ ಮಾನೆ ಇವರ ಮನೆ ಇದೆ ಎಂದು ತೋರಿಸಿರುತ್ತಾರೆ. ಅದರಂತೆ, ಪಟ್ಟಣ ಪಂಚಾಯತಿ ದಾಖಲೆಗಳಲ್ಲಿ ಎದುರುದಾರರುಗಳು ಸದರಿ ಶ್ರೀ ಬಾಬು ಫೀರಪ್ಪ ಚಂದಗಡೆ ಇವರೊಡನೆ ಶಾಮೀಲಾಗಿ, ಸದರಿ ಟಿಪಿಸಿ ನಂ. 1446ರ ಉತ್ತರ ಭಾಗಕ್ಕೆ ಶ್ರೀ ಕುಮಾರ ಆದಪ್ಪ ಮಾನೆ ಇವರ ಮನೆ ಇದೆ ಎಂದು ತೋರಿಸಿರುತ್ತಾರೆ. ಆದರೆ, ಸದರಿ ಆಸ್ತಿಯ ಉತ್ತರಕ್ಕೆ ತಮ್ಮ ಟಿಪಿಸಿ ನಂ.1448ರ ಜಾಗವಿರುತ್ತದೆ. ಇದರಿಂದ ಉಂಟಾಗುವ ತೊಂದರೆ ಬಗ್ಗೆ ಪಟ್ಟಣ ಪಂಚಾಯತಿಯವರಿಗೆ ಅರ್ಜಿಯನ್ನು ನೀಡಿ ದಾಖಲೆಗಳನ್ನು ಸರಿಪಡಿಸಲು ಕೋರಿದ್ದರೂ, ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಸದರಿ ಎದುರುದಾರರು ಸರ್ಕಾರದಿಂದ ನೀಡಲಾದ ಸುತ್ತೋಲೆ ಸಂಖ್ಯೆ: ಪೌನಿ/ಹ.ಬ/ಸಿಆರ್/119/2012-13 ದಿ: 02/01/2012 ರ ಅಂಶಗಳನ್ನು ಪರಿಗಣಿಸದೇ ತನಗೆ ತೊಂದರೆ ಉಂಟು ಮಾಡಿರುತ್ತಾರೆಂದು, ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. ಸದರಿ ಎದುರುದಾರರುಗಳಿಗೆ ರವಾನಿಸಲಾಗಿದ್ದ ನೋಟೀಸ್‌ನ ಪ್ರತಿಯು ಅವರಿಗೆ ತಲುಪಿರುವ ಬಗ್ಗೆ ನೋಂದಾಯಿತ ಅಂಚೆ ಸ್ವೀಕೃತಿಯನ್ನು ಹಿಂಪಡೆಯಲಾಗಿರುತ್ತದೆ. ಆದ್ದರಿಂದ, ಎದುರುದಾರರುಗಳ ಆಕ್ಷೇಪಣೆ ಏನು ಇಲ್ಲವೆಂದು ಪರಿಗಣಿಸಲಾಗಿದೆ.

3. ದೂರುದಾರರು ತಾವು ಸದಲಗ ಪಟ್ಟಣ ಪಂಚಾಯತಿ ವ್ಯಾಪ್ತಿಯ ರಹವಾಸಿಯಾಗಿದ್ದು, ಇವರು ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತಿ, ಸದಲಗ ಇವರಿಗೆ ದಿ:13/03/2014ರ ಅರ್ಜಿಯನ್ನು ನೀಡಿದ್ದು, ಹಾಜರುಪಡಿಸಿರುವ ಅರ್ಜಿಯ ಪ್ರತಿಯಿಂದ ಕಂಡು ಬರುತ್ತದೆ. ಸದರಿ ಅರ್ಜಿಯಲ್ಲಿ ದೂರುದಾರರು ತಾನು ಹಾಗೂ ತನ್ನ ಸಹೋದರನ ಹೆಸರಿನಲ್ಲಿ ಸದಲಗ ಪಟ್ಟಣ ಪಂಚಾಯತಿ ಆಸ್ತಿ ಸಂಖ್ಯೆ: 1448ರ ಜಾಗದ ಪ್ರತ್ಯಕ್ಷ ಕಬ್ಜ ವಹಿವಾಟಿನಲ್ಲಿ ಇದ್ದು, ಇದರ ಅಳತೆ 881 ಚ.ಅ ಗಳಿದ್ದು, ಇದರ ಚೆಕ್ಕು ಬಂದಿ ಸದರಿ ಆಸ್ತಿ ನಂ.1448 ರ ಪೂರ್ವಕ್ಕೆ ಸದರಿ 1448ರ ಆಸ್ತಿಗೆ ಹೋಗಿ ಬರಲು ತಮ್ಮ ಮಾಲ್ಕಿ ಬೋಳ ರಸ್ತೆ ಇದೆ ಎಂದು ಪಶ್ಚಿಮಕ್ಕೆ ಶ್ರೀ ವಿಲಾಸ್ ಲಕ್ಷ್ಮಣ ಮೋರೆ ಇದೆ ಎಂದು, ದಕ್ಷಿಣಕ್ಕೆ ಟಿಪಿಸಿ ನಂ.1446ರ ಜಾಗದಲ್ಲಿ ಶ್ರೀ ಬಾಬು ಫೀರಪ್ಪ ಚಂದಗಡ ಇವರ ಮನೆ ಇದೆ ಎಂದು ಹಾಗೂ ಉತ್ತರಕ್ಕೆ ಶ್ರೀ ಕುಮಾರ್ ಆದಪ್ಪ ಮಾನೆ ಇವರ ಮನೆ ಇದೆ ಎಂದು ತೋರಿಸಿ, ಅದರಂತೆ, ಆಸ್ತಿ ಸಂಖ್ಯೆ: 1448 ಕ್ಕೆ ಸಂಬಂಧಿಸಿದಂತೆ ಚೆಕ್ಕು ಬಂದಿ ಬಗ್ಗೆ ದೃಡೀಕೃತ ಪ್ರಮಾಣ ಪತ್ರವನ್ನು ನೀಡಬೇಕೆಂದು ಕೋರಿರುವುದು ಕಂಡು ಬರುತ್ತದೆ. ಇದಕ್ಕೆ ಉತ್ತರವಾಗಿ ಸದಲಗ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳು ದಿ:09/07/2014ರ ಪತ್ರದ ಮುಖೇನ ಸದರಿ ಟಿಪಿಸಿ ನಂ.1448ರ ಆಸ್ತಿಯ ಚೆಕ್ಕುಬಂದಿ ಬೇಡಿ ದೂರುದಾರರು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯ ಬಗ್ಗೆ ಪಟ್ಟಣ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಚರ್ಚೆಗಾಗಿ ಮಂಡಿಸಲಾಗಿ, ಸಭೆಯ ನಡುವಳಿಕೆಯಲ್ಲಿ ಅರ್ಜಿಯ ಜೊತೆಗೆ ಟಿಪಿಸಿ ನಂ.1448ರ ಖರೀದಿ ಪತ್ರವನ್ನು ಲಗತ್ತಿಸಿರುವುದಿಲ್ಲ. ಸದರಿ ಜಾಗದಲ್ಲಿ ಶ್ರೀ ಮಾನೆ ಇವರು ಗೇಟ್ ಅನ್ನು ಇಟ್ಟು ಶೆಡ್ ಅನ್ನು ನಿರ್ಮಿಸಿರುತ್ತಾರೆ ಹಾಗೂ ಸದರಿ ಶೆಡ್‌ನಲ್ಲಿ ಸಾಮಾನುಗಳನ್ನು ಸಂಗ್ರಹಿಸಿರುತ್ತಾರೆ. ಇದಲ್ಲದೇ, ಗಿಡಗಳನ್ನು ಸಹ ನೆಟ್ಟಿರುತ್ತಾರೆ. ಶ್ರೀ ಹಾಲಪ್ಪನವರ್ ಅವರ ಕಬ್ಜಾದಲ್ಲಿ ಸದರಿ ಟಿಪಿಸಿ ನಂ.1448 ಇಲ್ಲದಿರುವ ಬಗ್ಗೆ ವಿವರವಾಗಿ ಚರ್ಚಿಸಲಾಗಿ ಶ್ರೀ ಅಣ್ಣಾಸಾಹೇಬ್ ನೂರೊಂದಪ್ಪ ಹಾಲಪ್ಪನವರ್ ರವರು ಮೃತರಾಗಿರುವ ಕಾರಣ ಇದುವರೆಗೂ ಸದರಿ ಆಸ್ತಿಗೆ ವಾರಸ ಮಾಡಿಕೊಂಡಿರುವುದಿಲ್ಲ. ಜಾಗೆಯ ಖರೀದಿ ಪತ್ರ ಸಲ್ಲಿಸಿ ಜಂಟಿಯಾಗಿ ಅರ್ಜಿ ಸಲ್ಲಿಸಿದ್ದಲ್ಲಿ ಸದರಿಯವರಿಗೆ ಚೆಕ್ ಬಂದಿ ನೀಡಬೇಕೆಂದು ತೀರ್ಮಾನಿಸಿದ್ದು, ಕಾರಣ, ಸದರಿ ಆಸ್ತಿಯ ಖರೀದಿ ಪತ್ರದ ನಕಲು ಮತ್ತು ವಾರಸ ಮಾಡಿಕೊಂಡ ಬಗ್ಗೆ ತಮ್ಮ ಕಾರ್ಯಾಲಯಕ್ಕೆ ದಾಖಲಾತಿಗಳನ್ನು ಸಲ್ಲಿಸಿದಲ್ಲಿ,

N. Anand

ದೂರುದಾರರ ಅರ್ಜಿಯನ್ನು ಪರಿಶೀಲಿಸಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ.

4. ದೂರುದಾರರು ಟಿಪಿಸಿ ನಂ.1448ರ ಮಾಲೀಕರೆಂದು ತೋರಿಸಲು ಪಟ್ಟಣ ಪಂಚಾಯತಿಯ ಆಸ್ತಿ ತೆರಿಗೆಯ ಅನುಸೂಚಿ ನಂ.9ರ ಪ್ರತಿಯನ್ನು ಹಾಜರುಪಡಿಸಿದ್ದು, ಇದನ್ನು ಪರಿಶೀಲಿಸಿದಲ್ಲಿ ಮಾಲೀಕರ ಹೆಸರಿನ ಕಾಲಂ 1 ರಲ್ಲಿ ದೂರುದಾರರ ಹೆಸರು ಬಾಳಸಾಬ್ ಎಂದು ಹಾಗೂ ಅವರ ಸಹೋದರ ಅಣ್ಣಾಸಾಬ್ ಇವರ ಹೆಸರನ್ನು ದಾಖಲಿಸಿರುವುದು ಕಂಡು ಬರುತ್ತದೆ. ಹಾಗೆಯೇ ಆಸ್ತಿ ಸಂಖ್ಯೆ ಟಿಪಿಸಿ ನಂ.1446ರ ಆಸ್ತಿಗೆ ಮಾಲೀಕರು ಶ್ರೀ ಬಾಬು ಫೀರಪ್ಪ ಚಂದಗಡ ಎಂದು ಅನುಸೂಚಿ 9 ರ ಜೆರಾಕ್ಸ್ ಪ್ರತಿಯಲ್ಲಿ ಮಾಲೀಕರ ಹೆಸರಿನ ಕಾಲಂನಲ್ಲಿ ತೋರಿಸಿರುವುದು ಕಂಡು ಬರುತ್ತದೆ. ಸದರಿ ದಾಖಲೆಯನ್ನು ಹಾಜರುಪಡಿಸಲಾಗಿದೆ. ಪಟ್ಟಣ ಪಂಚಾಯತಿ ವತಿಯಿಂದ ಆಸ್ತಿ ಸಂ.ಟಿಪಿಸಿ ನಂ.1446 ಚೆಕ್ಕುಬಂದಿಯ ಬಗೆಗಿನ ಪ್ರಮಾಣ ಪತ್ರವನ್ನು ಪಂಚಾಯತಿ ವತಿಯಿಂದ ನೀಡಿದ್ದು, ಅದರ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ಟಿಪಿಸಿ ನಂ.1446ರ ಆಸ್ತಿಯ ಚೆಕ್ಕುಬಂದಿಯನ್ನು ಸದರಿ ಪ್ರಮಾಣ ಪತ್ರದಲ್ಲಿ ಪರಿಶೀಲಿಸಿಲಾಗಿ, ಸದರಿ ಆಸ್ತಿಯ ಪೂರ್ವಕ್ಕೆ ಕುಮಾರ ಮಾನೆ ಇವರ ಬೋಳ ರಸ್ತೆ, ಪಶ್ಚಿಮಕ್ಕೆ ವಿಲಾನಿ ಲಕ್ಷ್ಮಣ ಮೋಲೆ ಇವರ ಮನೆ, ದಕ್ಷಿಣಕ್ಕೆ ಟಿಪಿಸಿ ರಸ್ತೆ ಹಾಗೂ ಉತ್ತರಕ್ಕೆ ಕುಮಾರ್ ಆದಪ್ಪ ಮಾನೆ ಇವರ ಮನೆ ಎಂದು ತೋರಿಸಿರುವುದು ಕಂಡು ಬರುತ್ತದೆ. ಇದೇ ರೀತಿ ಸದರಿ ಟಿಪಿಸಿ ನಂ. 1446ರ ಖರೀದಿ ಪತ್ರದಲ್ಲೂ ಸಹ ಚೆಕ್ಕುಬಂದಿಯನ್ನು ವಿವರಿಸಿರುವುದು ಸ್ಪಷ್ಟ ಪಡುತ್ತದೆ. ಸದರಿ ಖರೀದಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ಖರೀದಿ ಪತ್ರದಲ್ಲಿ ಟಿಪಿಸಿ ನಂ.1446ರ ಆಸ್ತಿಯ ಉತ್ತರಕ್ಕೆ ಕುಮಾರ್ ಆದಪ್ಪ ಮಾನೆ ಇವರ ಮನೆ ಇರುವ ಬಗ್ಗೆ ನಮೂದಿಸಿರುವುದು ಕಂಡು ಬರುತ್ತದೆ.

5. ದೂರುದಾರರು ದಿ:09/07/2014ರಂದು ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತಿ, ಸದಲಗ ಇವರಿಗೆ ಟಿಪಿಸಿ ನಂ.1446ರ ಉತ್ತರ ಭಾಗಕ್ಕೆ ಟಿಪಿಸಿ ನಂ.1448 ಆಸ್ತಿ ಇದ್ದು, ಸದರಿ ಟಿಪಿಸಿ ನಂ.1446ರ ಆಸ್ತಿಯನ್ನು ಶ್ರೀ ಬಾಬು ಫೀರಪ್ಪ ಚಂದಗಡೆ ಇವರು ಖರೀದಿ ಪಡೆದುಕೊಂಡು ಪಂಚಾಯತಿ ದಾಖಲೆಗಳಲ್ಲಿ ತಮ್ಮ ಹೆಸರನ್ನು ಮಾಲ್ಕಿನಾತೆ ಇಂದ ದಾಖಲು ಮಾಡಿಕೊಂಡಿರುತ್ತಾರೆ. ಸದರಿ ಆಸ್ತಿಗೆ ಸಂಬಂಧಿಸಿದ ಎಲ್ಲ ಕಾಗದಪತ್ರಗಳ ಪ್ರತಿಯನ್ನು ಹಾಗೂ ಠರಾವು ನಕಲುಗಳ ಪ್ರತಿಯನ್ನು ಕೋರಿ ದೂರುದಾರರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಪಟ್ಟಣ ಪಂಚಾಯತಿ, ಸದಲಗ ಇವರಿಂದ ಯಾವುದೇ ಉತ್ತರವನ್ನು ದೂರುದಾರರಿಗೆ ನೀಡಿರುವುದಿಲ್ಲ ಹಾಗೂ ದಾಖಲೆಗಳನ್ನು ಒದಗಿಸಿರುವುದಿಲ್ಲ.

6. ಇದಲ್ಲದೇ, ದೂರುದಾರರು ತಮ್ಮ ಪ್ರಮಾಣ ಪತ್ರದಲ್ಲಿ ನೀಡಿರುವ ಚೆಕ್‌ಬಂದಿ ಶ್ರೀ ಶಿವರಾಜ್ ಕುಮಾರ್ ಮಾನೆ ಇವರು ಖರೀದಿಸಿರುವ ಆಸ್ತಿ ಸಂಖ್ಯೆ, ಟಿಪಿಸಿ ನಂ.1446ರ ಖರೀದಿ ಪತ್ರದಲ್ಲಿರುವ

ಚೆಕ್‌ಬಂದಿಗಳು ಹೊಂದಾಣಿಕೆ ಆಗುವುದು ಕಂಡು ಬರುತ್ತದೆ. ಆದಾಗ್ಯೂ ಸಹ ಎದುರುದಾರರುಗಳು ದೂರುದಾರರು ಕೋರಿರುವಂತೆ ಟಿಪಿಸಿ 1448ರ ಖಾಲಿ ಜಾಗದ ಚೆಕ್ ಬಂದಿಯ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲವೆಂದು ಕಂಡು ಬರುತ್ತದೆ. ಇದಲ್ಲದೇ, ಎದುರುದಾರರುಗಳು ಪ್ರಕರಣದ ದೂರಿನಂಶದ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ ಹಾಗೂ ಎದುರುದಾರರುಗಳು ಸ್ಥಳ ಪರಿಶೀಲಿಸಿದೇ ಟಿಪಿಸಿ ನಂ. 1446ರ ಆಸ್ತಿಯ ಚೆಕ್‌ಬಂದಿಯನ್ನು ತಪ್ಪಾಗಿ ನಮೂದು ಮಾಡಿರುವುದು ಕಂಡು ಬರುತ್ತದೆ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸದಲಗ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಟಿಪಿಸಿ ನಂ.1446ರ ಚೆಕ್‌ಬಂದಿಯಲ್ಲಿ ಕಂಡು ಬಂದಿರುವ ವ್ಯತ್ಯಾಸವನ್ನು ಸರಿಪಡಿಸಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 30/1
(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು. 30/1/17